<u>ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ</u>

<u>ಸಿ.ಸಿ.ನಂ.77/2015</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶಮೀಲ್ ಅಹ್ಮದ್ ಬೇಗ್ | ಪಿ.ಡಬ್ಲ್ಯೂ-1 |
| ತಂದೆಯ ಹೆಸರು | : | ಲೇ.ಇಲಿಯಾಸ್ ಬೇಗ್ | ಸಿ.ಡಬ್ಲ್ಯೂ-2 |
| ವಯಸ್ಸು | : | 47 ವರ್ಷ | |
| ಉದ್ಯೋಗ | : | ಅಬ್ಕಾರಿ ರಕ್ಷಕ ಹುಣಸೂರು ಅಬ್ಕಾರಿ ಉಪಾಧೀಕ್ಷಕರ ಕಛೇರಿ,ಹುಣಸೂರು ಉಪ ವಿಭಾಗ. | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ: 26.07.2016 |
| ವಾಸಸ್ಥಳ | : | ಹುಣಸೂರು | |

<u>ಮುಖ್ಯ ವಿಚಾರಣೆ : ಎಪಿಪಿ ರವರಿಂದ:</u>

. ನಾನು ಜುಲೈ 2005 ರಿಂದ ಹುಣಸೂರು ಅಬ್ಕಾರಿ ಉಪ ವಿಭಾಗದ ಕಛೇರಿಯಲ್ಲಿ ಅಬ್ಕಾರಿ ರಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ದಿನಾಂಕ:15.01.2009 ರಂದು ನಾನು ಮತ್ತು ಚಾಸ-1 ಹಾಗೂ ಚಾಸಾ-3 ರಿಂದ ಚಾಸಾ-5 ಮತ್ತು ಚಾಸಾ-7 ರವರು ಹಾಗೂ ವಾಹನ ಚಾಲಕ ಎಸ್.ಪುಟ್ಟರಾಜುರವರು ನಮ್ಮ ಇಲಾಖಾ ವಾಹನ ಸಂಖ್ಯೆ:ಕೆಎ-09-ಜಿ-620 ರಲ್ಲಿ ಹೆಚ್.ಡಿ.ಕೋಟೆ ತಾಲ್ಲೂಕು ಹಂಪಾಪುರ ಹೋಬಳಿ, ಕ್ಯಾತನಹಳ್ಳಿ ಗ್ರಾಮದ ಬಳಿ ರಸ್ತೆ ಗಸ್ತು ಮತ್ತು ಕಾವಲು ಮಾಡುತ್ತಿದ್ದಾಗ ಈ ಪ್ರಕರಣದ 1ನೇ ಆರೋಪಿ ತಮ್ಮ ಮನೆಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಖಚಿತ ವರ್ತಮಾನದ ಮೇರೆಗೆ ಗಂಗಡಹೊಸಳ್ಳಿ ಗ್ರಾಮಕ್ಕೆ ಹೋಗಿ ಗ್ರಾಮಸ್ಥರನ್ನು 1ನೇ ಆರೋಪಿಯ ಮನೆಯ ಬಗ್ಗೆ ವಿಚಾರಿಸಿ 1ನೇ ಆರೋಪಿ ಮನೆ ಬಳಿ ಹೋಗಿರುತ್ತೇವೆ. 1ನೇ ಆರೋಪಿಯ ಮನೆಯ ಬಾಗಿಲು ಮುಕ್ಕಾಲು ಭಾಗ ಮುಚ್ಚಿತ್ತು ಹಾಗೂ ಮನೆಯ ಒಳಗೆ ಲೈಟ್ ಉರಿಯುವುದು ಕಾಣುತ್ತಿತ್ತು, 1ನೇ ಆರೋಪಿಯ ಹೆಸರು ಕೂಗಿದಾಗ ಅವರು ಸ್ವಲ್ಪ ಸಮಯದ ನಂತರ ಹೊರಗೆ ಬಂದಿರುತ್ತಾರೆ. 1ನೇ ಆರೋಪಿಯನ್ನು ವಿಚಾರಿಸಿದಾಗ ತಾನು ಮದ್ಯ ಮಾರಾಟ ಮಾಡುತ್ತಿಲ್ಲ ಎಂದು ತಿಳಿಸಿದರು ಮತ್ತು ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ನೋಡಿ ಹೆದರುತ್ತಿದ್ದರು. ಸ್ಥಳೀಯರನ್ನು ಪಂಚರಾಗಿ ಬರಲು ಕೋರಿಕೊಂಡಾಗ ಅವರು ಸಹಕರಿಸಲು ನಿರಾಕರಿಸಿರುತ್ತಾರೆ. ಆದರಿಂದ ನಮ್ಮ ಇಲಾಖಾ ಸಿಬ್ಬಂದಿಗಳನ್ನು ಪಂಚರಾಗಿ ಪರಿಗಣಿಸಿಕೊಂಡು ಸ್ಥಳದಲ್ಲಿ ಶೋಧನಾ ವಾರೆಂಟನ್ನು ತಯಾರಿಸಲಾಯಿತು. 1ನೇ ಆರೋಪಿ ಮನೆಯನ್ನು ಶೋಧನೆ ಮಾಡಿದಾಗ ಅವರ ಮನೆಯಲ್ಲಿ ಎರಡು ಕೊಠಡಿಗಳು ಇದ್ದವು. ಎಡಭಾಗದ ಕೊಠಡಿಯಲ್ಲಿ ಒಂದು ಮಂಚದ ಕೆಳಗಡೆ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇರುವುದು ಕಂಡುಬಂದಿತು. ಅದನ್ನು ಲಾಟಿಯಿಂದ ಕುಟ್ಟಲಾಗಿ ಗಾಜಿನ ಬಾಟಲ್ ಇರುವಂತಹ ಶಬ್ದ ಕೇಳಿಬಂತು. ಅದನ್ನು ಹೊರಗೆ ತೆಗೆದು ನೋಡಲಾಗಿ ಅದರಲ್ಲಿ 180 ಎಂಎಲ್‌ನ ಒಟ್ಟು 50 ಮದ್ಯದ ಬಾಟಲ್‌ಗಳು ಇದ್ದವು. ಅವುಗಳ ಪೈಕಿ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 30 ಬಾಟಲ್‌ಗಳು ಹಾಗೂ ನಂ.1 ಹೈವೇ ಡಿಲಕ್ಸ್ ವಿಸ್ಕಿಯ 20 ಬಾಟಲ್‌ಗಳು ಇದ್ದವು. 1ನೇ ಆರೋಪಿಗೆ ವಿಚಾರಿಸಿದಾಗ ಅವರ ಬಳಿ

ಯಾವುದೇ ಪರವಾನಗಿ ಇರಲಿಲ್ಲ ಹಾಗೂ ಸದರಿ ಬಾಟಲ್‌ಗಳನ್ನು ಮಾರಾಟ ಮಾಡಲು ತಂದು ಇಟ್ಟುಕೊಂಡಿರುವುದಾಗಿ ತಿಳಿಸಿದರು. 1ನೇ ಆರೋಪಿಯ ಹೆಸರು ಮತ್ತು ವಿಳಾಸ ಕೇಳಿದಾಗ ತನ್ನ ಹೆಸರು ರಾಜು ಬಿನ್ ಗುರುವೇಗೌಡ, ಗಂಗಡಹೊಸಹಳ್ಳಿ ಗ್ರಾಮ, ಹೆಚ್.ಡಿ.ಕೋಟೆಯ ವಾಸಿ ಎಂದು ತಿಳಿಸಿದರು. ಅವರನ್ನು ನೋಡಿದರೆ ಗುರುತಿಸುತ್ತೇನೆ. 1ನೇ ಆರೋಪಿಯು ಗೈರು ಹಾಜರಿರುತ್ತಾರೆ ಅವರ ಗುರುತಿನ ಬಗ್ಗೆ ಅವರ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಸ್ಥಳದಲ್ಲಿ ಸದರಿ ಬಾಟಲ್‌ಗಳ ಮೇಲೆ ಇರುವ ಭದ್ರತಾ ಚೀಟಿಯನ್ನು ಅಲ್ಟ್ರಾ ವಯಲೆಟ್ ಲ್ಯಾಂಪ್ ಹಾಗೂ ಭೂತಕನ್ನಡಿಯಿಂದ ಪರಿಶೀಲಿಸಿದಾಗ ಅದರಲ್ಲಿ ಇಲಾಖಾ ಗುರುತು ಚಿಹ್ನೆಗಳು ಕಂಡುಬಂದಿರುವುದಿಲ್ಲ. ಆದ್ದರಿಂದ ಅವುಗಳನ್ನು ನಕಲಿ ಮದ್ಯದ ಬಾಟಲ್‌ಗಳು ಎಂದು ಪರಿಗಣಿಸಲಾಯಿತು. 1ನೇ ಆರೋಪಿಯನ್ನು ವಿಚಾರಿಸಿದಾಗ ಸದರಿ ಬಾಟಲ್‌ಗಳನ್ನು ಶಿವಕುಮಾರ್ ಕರಿಮುದ್ದನಹಳ್ಳಿ ಗ್ರಾಮ ಹುಣಸೂರು ತಾಲ್ಲೂಕು ರವರು ತಂದುಕೊಟ್ಟಿರುತ್ತಾರೆ ಎಂದು ತಿಳಿಸಿದರು. ಸದರಿ ಬಾಟಲ್‌ಗಳನ್ನು ಮಹಜರ್ ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಳ್ಳಲಾಯಿತು. ಸದರಿ ಬಾಟಲ್‌ಗಳನ್ನು ಬಿಳಿ ಬಟ್ಟೆಯಿಂದ ಬಾಯಿ ಹೊಲೆದು ಇಲಾಖಾ ಚಾಪಾ ಗುರುತಿನಿಂದ ಸೀಲ್ ಮಾಡಲಾಯಿತು ಹಾಗೂ ಚೀಟಿಯನ್ನು ಅಂಟಿಸಲಾಯಿತು. ಸದರಿ ಬಾಟಲ್‌ಗಳ ಪೈಕಿ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 18 ಬಾಟಲ್‌ಗಳು ಹಾಗೂ ನಂ.1 ಹೈವೇ ಡಿಲಕ್ಸ್ ವಿಸ್ಕಿಯ 10 ಬಾಟಲ್‌ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಾಗಿ ಪ್ರತ್ಯೇಕವಾಗಿ ತೆಗೆದುಕೊಳ್ಳಲಾಯಿತು. ಸದರಿ ಮಾದರಿಗಾಗಿ ತೆಗೆದುಕೊಂಡ ಒಟ್ಟು 28 ಬಾಟಲ್‌ಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಸಿ.ಸಿ.ನಂ. 449/2009 ರಲ್ಲಿ ಎಂಒ-1 ರಿಂದ ಎಂಒ-28 ಎಂದು ಗುರುತಿಸಲಾಗಿದೆ. ಮಹಜರ್ ಮಾಡಿದಾಗ ಸಮಯ ರಾತ್ರಿ 9-15 ರಿಂದ 10-30 ಆಗಿತ್ತು. ಸದರಿ ಮಹಜರನ ಅಸಲು ಪ್ರತಿ ಸಿ.ಸಿ.ನಂ. 449/2009 ರಲ್ಲಿ ನಿಪಿ-1 ಎಂದು ಗುರುತಿಸಲಾಗಿದೆ. ಸದರಿ ಮಹಜರ್‌ನ ದೃಢೀಕೃತ ನಕಲನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಮಹಜರ ದೃಢೀಕೃತ ನಕಲನ್ನು ನಿಪಿ-1, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆ ದಿನ 1ನೇ ಆರೋಪಿಯನ್ನು ದಸ್ತಗಿರಿ ಮಾಡಿ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ.

ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಒ.,

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹೆಗ್ಗಡದೇವನಕೋಟೆ.